**ನಮ್ಮ ಪಕ್ಷಕ್ಕೆ ನಾಯಕರು ಬೇಡ, ಸೇವಕರು ಬೇಡ, ಕಾರ್ಮಿಕರು ಬೇಕು. ಸಂಬಳ ತಗೊಂಡು ನಿಮ್ಮ ಡ್ಯೂಟಿ ಕರೆಕ್ಟಾಗಿ ಮಾಡಿ ಹೊರಟ್ಹೋಗಬೇಕು.**

ಮಾಡ್ತಿದ್ದೆ.

★ *ಈಗಾಗಲೇ ಇರುವ ಯಾವುದಾದರೂ ಪಾರ್ಟಿ ಸೇರಿಕೊಳ್ಳಬಹುದಿತ್ತಲ್ಲ?*

ನನ್ನ politics ಈಗಿನ ರೀತಿಯದ್ದು ಅಲ್ಲ. drastic change ಆಗಬೇಕು ಅಂತ. ನನ್ನ 'ಸೂಪರ್' ಸಿನಿಮಾ ಇತ್ತಲ್ಲ ಹಾಗೆ. ಯಾಕೆ ಬೇರೆ ದೇಶದ ತರಹ ನಮ್ಮ ದೇಶವೂ ಆಗಬಾರದು? ಪ್ರೈಮ್ ಮಿನಿಸ್ಟರ್ ಆರಾಮವಾಗಿ ಜನಸಾಮಾನ್ಯರ ತರಹ ಶಾಪಿಂಗ್ ಮಾಡ್ಕೊಂಡು ಓಡಾಡಬೇಕು. ರಾಜಕೀಯ systematic ಆಗಿ ನಡೆಯಬೇಕು–– ಕಾರ್ಪೊರೇಟ್ ಕಂಪೆನಿ ತರಹ.

★ *ನೀವು ಪಾಲಿಟಿಕಲ್ ಸಯನ್ಸ್ ಓದಿದ್ದೀರಾ?*

ಇಲ್ಲ ಬಿಕಾಂ, ಕಾಮರ್ಸ್ ಓದಿದ್ದು. ವಿದೇಶಗಳಲ್ಲಿ ಎಲ್ಲವೂ ಎಷ್ಟು ಚೆನ್ನಾಗಿದೆ. ನಮ್ಮಲ್ಲಿ ಏಕಿಲ್ಲ? ನಮ್ಮಲ್ಲಿ ದುಡ್ಡಿದೆ, ವೈಚಾರಿಕತೆ ಇದೆ. rich culture ಇದೆ. ಆದರೂ ಏಕೆ ಹಿಂಗಿದ್ದೀವಿ... ಈ ಥರ ನನಗೆ ಮನಸ್ಸಿನ ಒಳಗೆ ಕಾಡ್ತಾನೇ ಇತ್ತು. ಸ್ಕ್ರಿಪ್ಟ್ ಮಾಡಿದಾಗ ತಳಮುಟ್ಟೋದು ಅಂತೀವಲ್ಲ, ಹಾಗೆ ಮೊದಲು ನೀನು ಸರಿ ಮಾಡ್ಕೊ ಅಂತ ಒಮ್ಮೆ ಅನ್ನಿಸ್ತು. ಆಗ 'ಉಪ್ಪಿ2' ಸಿನಿಮಾ ಮಾಡ್ದೆ. ಆದರೆ ಅದು spiritual ಆಯ್ತು. ಬುದ್ಧ, ಜೆ.ಕೃಷ್ಣಮೂರ್ತಿ ಮುಂತಾದವರ ಪುಸ್ತಕಗಳು ಓದಿದೆ. ಎಲ್ಲ ನನ್ನೊಳಗೆ ಆಗುವ ಭಾವನೆಗಳಾ.. ಗೊಂದಲಗಳಾ? ನಾನು ಆರಾಮ ಇದ್ರೆ ಸಾಕಾ? ಚೆನ್ನಾಗಿರೋರೂ ಸಾಕಷ್ಟು ಜನ ಇದ್ದಾರೆ. ಆದರೆ ನಾನು ಹಾಗಿರಲು ಸಾಧ್ಯವಿಲ್ಲ ಎಂದು ಅನ್ನಿಸ್ತು. ಚಿಕ್ಕವನಿದ್ದಾಗ ಒಂದೇ ಪ್ಯಾಂಟ್, ಒಂದು ಟಿಫಿನ್ ಸಿಕ್ಕಿದಾಗ ಎಷ್ಟು ಆನಂದದಿಂದ ಇದ್ದೆ. ಆದರೆ ಈಗ ನನ್ನ ಮಕ್ಕಳು ಕಾರಿನಲ್ಲಿ ಓಡಾಡಿದ್ರೂ ನನ್ನಷ್ಟು ಖುಷಿಯಾಗಿ ಇದ್ದಾರಾ? ಹೀಗೆ ಪ್ರಶ್ನೆಗಳು..

★ *ಪಕ್ಷ ಕಟ್ಟೋದು ಅಷ್ಟು ಸುಲಭವಾ? ಜನರಿಗೆ ನಿಮ್ಮ ವಿಚಾರಗಳನ್ನು ತಿಳಿಸಲು ಪಕ್ಷಕ್ಕೆ ಒಂದು ಸಾಂಸ್ಥಿಕ ಸ್ವರೂಪ ಬೇಕಲ್ಲವಾ?*

ಸತ್ಯ ಹಿಡಿದುಕೊಂಡು ಹೊರಟು ಬಿಡೋಣ. ನಾನ್ ಗೆಲ್ತೀನೋ ಸೋಲ್ತೀನೋ ಬೇಡ. ನನಗೊಂದು satisfaction ಸಿಗುತ್ತದೆ. ನಾನು ಹೇಳುವುದರಲ್ಲಿ ಸತ್ಯ ಇದ್ದರೆ reach ಆಗುತ್ತೆ. ಇಲ್ಲೊಂದು system ಇದೆ. ಒಂದು ಪಾರ್ಟಿ ಬೇಕು. ಅದಕ್ಕೆ ಒಂದಿಷ್ಟು ಕ್ಯಾಂಡಿಡೇಟ್ಸ್ ಬೇಕು. ಪಾರ್ಟಿಯಿಂದ votersಗೆ ಏನು communicate ಆಗಬೇಕು..? ವಿಚಾರಗಳು ಅಲ್ವೆ? Not other things, ಜಾತಿ, ಧರ್ಮ, ಇದು ಯಾವುದೂ ಅಲ್ಲ. ಇದು ಸರಿಯಲ್ಲ ಅಂತ ಜನರಿಗೆ ಗೊತ್ತು. ಆದರೆ ಅದೇ ನಡೆದುಕೊಂಡು ಹೋಗ್ತಿದೆ. ಮಾಧ್ಯಮಗಳ ಮೂಲಕ–– ಟೀವಿ, ಸ್ಮಾರ್ಟ್ ಫೋನ್ ಮೂಲಕ 50 ಪರ್ಸೆಂಟ್ ಜನರಿಗೆ reach ಆಗುತ್ತೆ. ಜನಸಂಪರ್ಕ ಅಂತಾರೆ. ಅಲ್ಲಿ ಹೋಗಿ ಸಭೆ ಮಾಡಿದರೂ ಆ ಊರಿನ ಎಲ್ಲರೂ ಬರೋದಿಲ್ಲ. ಎಲ್ಲರಿಗೂ ರೀಚ್ ಆಗೋದು ಮತ್ತೆ ಪೇಪರ್, ಫೋನ್ ಮೂಲಕ ಅಲ್ಲವೆ? ದುಡ್ಡು ಏಕೆ ಹಾಕಬೇಕು? ದುಡ್ಡು ಎಲ್ಲಿಂದ ಬರುತ್ತೆ? ದುಡ್ಡು ಹಾಕಿ ಮತ್ತೆ ದುಡ್ಡು ತೆಗೀಬೇಕಲ್ಲ? ಪಾರ್ಟಿ ಫಂಡ್ ಎಂದರೂ ಅದೂ ಜನ ಕೊಟ್ಟಿದ್ದೇ ಅಲ್ವಾ? ಜಾತಿ– ಮತ– ಭಾಷೆ ಎಲ್ಲವೂ ನನ್ನ ಪರ್ಸನಲ್. ಡಿವೈಡ್ ಅಂಡ್ ರೂಲ್ ಪಾಲಿಸಿ, ಬ್ರಿಟಿಷರು ಮಾಡಿದ್ದನ್ನೇ ನಾವೂ ಮಾಡ್ತಿದೀವಿ. ರಾಜಕಾರಣಿಗಳು ಜನರ ಹಾಲಿನಂತಹ ಮನಸ್ಸನ್ನು ಒಡೆದು ಅದನ್ನು ಪನ್ನೀರ್ ಮಾಡಿ, ಮೊಸರು ಮಾಡಿ ಫ್ರಿಜ್‌ನಲ್ಲಿ ಇಟ್ಟುಬಿಟ್ಟಿದ್ದಾರೆ. let us go to the milk.

★ *ಈ ಹೊಸ ವಿಚಾರ ಜನರಿಗೆ ಹಿಡಿಸುತ್ತೆ ಅಂತೀರಾ?*

ಇಲ್ಲಿ ಒಂದು ಪೊಲಿಟಿಕಲ್ ಸಿಸ್ಟಂ ಇದೆ. ನನ್ನ ವಿಚಾರ ಹೇಳ್ತೀನಿ. ಜನರಿಗೆ ಹಿಡಿಸಿದ್ರೆ ವೋಟ್ ಹಾಕ್ತಾರೆ. ಅಟ್‌ಲೀಸ್ಟ್ ಹತ್ತು ಪರ್ಸೆಂಟ್ ಜನರಾದ್ರೂ ವಿಚಾರವಂತರಾಗ್ತಾರೆ. ಹೇಳೋಕೆ ಶುರು ಮಾಡಿದಾಗ ಜನ ತಮಗೆ ಸಂಬಂಧಿಸಿದ್ದು ಅಂತ ಕೇಳ್ತಾರೆ. ನಾನು ಮಾಡಲು ಆಗದಿದ್ದರೆ ಬೇರೆಯವರು ಮಾಡಬಹುದು. ಜೀರೋದಲ್ಲಿ ಏನು ಆ್ಯಡ್ ಆದರೂ ಪ್ಲಸ್ಸೇ. ಝೀರೊ ಅಂದರೆ ಗಾಡ್.

★ *ಪಕ್ಷ ಹೇಗೆ ಶುರುವಾಯಿತು?*

ಮಹೇಶ್ ಗೌಡ್ರು ಅಂತ ಬಂದ್ರು. ಅವರ ಪಕ್ಷ– ನಮ್ಮ ಕಾನ್ಸೆಪ್ಟ್. ನಾನು ಹೊಸ ಪಕ್ಷ ಮಾಡಲು ಆರು– ಎಂಟು ತಿಂಗಳು ಆಗುತ್ತದೆ. ಆಗಲೇ ಅನೌನ್ಸ್ ಮಾಡಿ ಆಗಿದೆ. ಜನ expectation ಮಾಡ್ತಿದ್ರು. ಅದಕ್ಕೇ ಅವರು ನೋಂದಣಿ ಮಾಡಿದ್ದ ಕರ್ನಾಟಕ ಪ್ರಜ್ಞಾವಂತ ಜನತಾ ಪಕ್ಷ.. ಅದನ್ನೇ ಶುರು ಮಾಡಿದ್ದೀವಿ. ಇದೆಲ್ಲ blind ಆಗಿ ಆದದ್ದು. ನಾನು ಮೊದಲೇ ಪ್ಲಾನ್ ಮಾಡ್ಕೊಂಡು ಬರಬೇಕಿತ್ತು. ಆದರೆ ಅವರು ಬಂದ್ರು, ಆಟೋ ಚಿನ್ಹೆ ಸಿಕ್ತು. ಎಲ್ಲ ದೇವರು ಮಾಡ್ಸಿಕೊಂಡು ಹೋಗ್ತಾನೆ.




★ *ಪಕ್ಷಕ್ಕೆ ಅಧ್ಯಕ್ಷ, ಕಾರ್ಯದರ್ಶಿ ಇದೆಲ್ಲ ಬೇಡ ಅಂತೀರಾ?*

ಎಲ್ಲ ಇದ್ದಾರೆ. ನಾನೇ ಅಧ್ಯಕ್ಷ. ಆದರೆ ಅದೊಂದು ಫಾರ್ಮಾಟ್ ಇದೆ ಗುರೂ, this is the biggest problem. ಪಕ್ಷ ಬೆಳೆಸೋದು. ಪಕ್ಷ

74ನೇ ಪುಟಕ್ಕೆ

